## ಮಾಹಿತಿ ವಿನಿಮಯಕ್ಕೆ ‘ಚಿರ್ಪ್’

ಸ್ನೇಹಿತರು ಪರಸ್ಪರ ಡಿಜಿಟಲ್ ಮಾಹಿತಿ ಹಂಚಿಕೊಳ್ಳಲು ಇಷ್ಟಪಡುವವರಾದರೆ ಇಲ್ಲಿದೆ ಹೊಸ ಐಫೋನ್ ಅಪ್ಲಿಕೇಶನ್ ‘ಚಿರ್ಪ್’. ವೆಬ್ ಪೇಜ್, ಫೋಟೊ, ವಿಡಿಯೋಗಳನ್ನು ಪರಸ್ಪರ ಒಂದು ಸಂಗೀತದ ಸ್ವರ ಹೊಮ್ಮಿಸುವ ಮೂಲಕ ಹಂಚಿಕೊಳ್ಳುವ ಈ ಅಪ್ಲಿಕೇಶನ್ ಬಳಸುವುದು ತೀರಾ ಸುಲಭ.

ಯಾವುದೆ ಸಾಮಾಜಿಕ ಜಾಲ ತಾಣದಲ್ಲಿ ನೀವು ಹಂಚಿಕೊಳ್ಳ ಬಯಸುವ ಮಾಹಿತಿಯನ್ನು ಅಪ್‌ಲೋಡ್ ಹೇಗೆ ಮಾಡುವಿರೋ ಹಾಗೇ ಇಲ್ಲಿಯೂ ಕೂಡಾ ಮಾಡಬಹುದು. ಆದರೆ ನೀವು ಹೊಸದಾಗಿ ಅಪ್‌ಲೋಡ್ ಮಾಡಿದ ವಿಷಯ ನಿಮ್ಮ ಜಾಲತಾಣದ ಸ್ನೇಹಿತರಿಗೆ 20 ವಿವಿಧ ಸಂಗೀತದ ಸ್ವರಗಳ ಮೂಲಕ ಫೋನ್‌ನಲ್ಲಿ ಚಿತ್ರವಾಗುತ್ತದೆ. ಅಂದರೆ ಆ ಸಂಗೀತದ ಸ್ವರ ಮಾಹಿತಿಯನ್ನು ಡಿಕೋಡ್ ಮಾಡುತ್ತದೆ. ಇದು ಚಿರ್ಪ್ ಮೂಲಕ ಸಾಧ್ಯವಾಗಿದೆ. ಇದು ಉಚಿತ ಕೂಡಾ.







## ಯೂಟ್ಯೂಬ್ ಹೊಸ ಆಯ್ಕೆ

ಯೂಟ್ಯೂಬ್‌ನಲ್ಲಿ ಯಾವುದಾದರೂ ವಿಡಿಯೋ ಅಪ್‌ಲೋಡ್ ಮಾಡಬೇಕೆಂದಿದೆಯಾ? ಆದರೆ ಅವರ ಮುಖ ಕಂಡರೆ ಎಂಬ ಆತಂಕವಾ? ನಿಮ್ಮ ಆತಂಕ ನಿವಾರಿಸಲು ಯೂಟ್ಯೂಬ್ ಹೊಸ ಆಯ್ಕೆಯನ್ನು ನೀಡಿದ್ದು ಇದರ ಮೂಲಕ ಮುಖದ ಭಾಗವನ್ನು ಮಸುಕು ಮಾಡಬಹುದು.

ವಿಡಿಯೋ ಅಪ್‌ಲೋಡ್ ಮಾಡಿದ ನಂತರ ಯೂಟ್ಯೂಬ್‌ನ ವಿಡಿಯೋ ಟೂಲ್ ಆಯ್ಕೆ ಮಾಡಿಕೊಂಡು ‘ಬ್ಲರ್ ಫೇಸ್’ ಎಂಬುದರ ಮೇಲೆ ಕ್ಲಿಕ್ ಮಾಡಿ. ಇದರ ಮೂಲಕ ಮಸುಕು ಮಾಡಿದ ವಿಡಿಯೋದ ಪ್ರಿವ್ಯೂ ಕೂಡ ನೋಡಬಹುದು.

ಆದರೆ ಇಲ್ಲೊಂದು ಸಮಸ್ಯೆ ಇದೆ. ಅದು ಎಲ್ಲಾ ಮುಖಗಳನ್ನು ಮಸುಕು ಮಾಡುತ್ತದೆ. ಜೊತೆಗೆ ಬೆಳಕು, ವಿಡಿಯೋ ಗುಣಮಟ್ಟ ಮತ್ತಿತರ ಸಮಸ್ಯೆಗಳಿಂದ ಮುಖವನ್ನು ಹುಡುಕಲು ಈ ಆಯ್ಕೆ ವಿಫಲವಾಗಬಹುದು.

■ ಎಸ್.ತುಂಬೆ

## ಕ್ರೀಡಾ ಮಾಹಿತಿಗೆ ‘ರಿಪಲ್’

ಕ್ರೀಡಾಸಕ್ತರಿಗೆ ಇಲ್ಲಿದೆ ಹೊಸ ಅಪ್ಲಿಕೇಶನ್. ಪಂದ್ಯಗಳನ್ನು ವೀಕ್ಷಿಸುವ, ಮನೆಯಲ್ಲೂ ಟೀವಿಯಲ್ಲಿ ಅದನ್ನು ನೋಡುವ ಹವ್ಯಾಸ ಇರುವವರಿಗೆ ಈ ಅಪ್ಲಿಕೇಶನ್ ಸೂಕ್ತ. ಈ ‘ರಿಪಲ್’ ಅಪ್ಲಿಕೇಶನ್ ಒಂದೇ ಬಾರಿ ಎರಡೆರಡು ಕೆಲಸ ಮಾಡುತ್ತದೆ. ಉದಾಹರಣೆಗೆ ಒಲಿಂಪಿಕ್ಸ್. ಕ್ರೀಡಾಂಗಣಗಳು, ಸಮೀಪ ಇರುವ ಕೆಫೆ, ಎಟಿಎಂ, ಉಪಾಹಾರಗೃಹ, ಟ್ಯಾಕ್ಸಿ, ಬಸ್ ಸೇವೆ ಮೊದಲಾದವುಗಳ ಬಗ್ಗೆ ಇದು ಮಾಹಿತಿ ನೀಡುತ್ತದೆ. ಜೊತೆಗೆ ಪಂದ್ಯದ ಫಲಿತಾಂಶ, ಸುದ್ದಿ, ಪದಕಗಳ ಸಂಖ್ಯೆ ಇವುಗಳನ್ನೂ ತಿಳಿಸುತ್ತದೆ. ಬಳಕೆದಾರರು ತಮ್ಮ ನೆಚ್ಚಿನ ದೇಶ ಹಾಗೂ ಕ್ರೀಡಾಪಟುವನ್ನು ಆಯ್ಕೆ ಮಾಡಿಕೊಳ್ಳಬಹುದು.

## ಅಂಧರಿಗಾಗಿ ಹೊಸ ಅಪ್ಲಿಕೇಶನ್

ಬಸ್ ನಿಲುಗಡೆ ಬಗ್ಗೆ, ಉಪಾಹಾರಗೃಹದಲ್ಲಿ ಮೆನು ಓದುವುದರಲ್ಲಿ ನಮ್ಮ ನಿಮ್ಮಂಥವರಿಗೆ ಅಷ್ಟೇನೂ ಕಷ್ಟವಾಗಲಾರದು. ಆದರೆ ಅಂಧರಿಗೆ? ಅವರಿಗಾಗಿಯೇ ನೆರವು ನೀಡುವ ಹೊಸ ಅಪ್ಲಿಕೇಶನ್ ಜಿಯೋರ್ಜಿ ಇದೀಗ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಲಭ್ಯ. ಬಳಕೆದಾರರು ಫೋನ್ ಮೇಲೆ ಬೆರಳಾಡಿಸುವುದರ ಮೂಲಕ ವಿವಿಧ ಆಯ್ಕೆಗಳನ್ನು ಬಳಸಬಹುದು. ಇದು ಜೋರಾಗಿ ಓದಿ ಹೇಳುತ್ತದೆ. ಬೀಪ್ ಸದ್ದು ಬಂದರೆ ಅದನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದರ್ಥ.

ಈ ಅಪ್ಲಿಕೇಶನ್‌ನಿಂದ ಕಾಲ್ ಮಾಡಬಹುದು, ಕಿರು ಸಂದೇಶ ಕಳಿಸಬಹುದು. ಜೊತೆಗೆ ಯಾವಾಗ ಬಸ್ ಬರುತ್ತದೆ, ಯಾವ ದಿಕ್ಕಿನಿಂದ ಬರುತ್ತದೆ ಎಂಬುದನ್ನೂ ಇದು ತಿಳಿಸುತ್ತದೆ. ಆದರೆ ಸದ್ಯ ಇದು ಭಾರತದಲ್ಲಿ ಲಭ್ಯವಿಲ್ಲ. ಶೀಘ್ರವೇ ಭಾರತದಲ್ಲೂ ನೀಡಲಾಗುವುದು ಎಂಬುದು ಕಂಪೆನಿ ಹೇಳಿಕೆ.

